ಉಸ್ತಾದ್ ಆಶೀಷ್ ಖಾನ್ ಅವರು ಹುಟ್ಟಿದ್ದು ಸಂಗೀತ ದಿಗ್ಗಜರಿದ್ದ ಕುಟುಂಬದಲ್ಲಿ, ಬೆಳೆಯುವಾಗ ಅವರ ಸುತ್ತಮುತ್ತಲೂ ಒಂದು ಉಜ್ವಲವಾದ ಸಂಗೀತ ಪರಂಪರೆಯಿತ್ತು. ಇಂಥದೊಂದು ಪರಿಸರದಲ್ಲಿ ಕಳೆದ ಅವರ ಬಾಲ್ಯ, ಅವರ ಆರಂಭಿಕ ಸಂಗೀತ ಶಿಕ್ಷಣ ಹೇಗಿದ್ದಿರಬಹುದು, ನನ್ನೊಳಗೆ ಈ ಪ್ರಶ್ನೆ ಮೂಡಿದಂತೆ ಅವರು ಕಳೆದ ಶತಮಾನದ ಎಪ್ಪತ್ತನೇ ದಶಕಕ್ಕೆ ಜಾರಿದರು.

"ನನ್ನ ಬಾಲ್ಯ ಕಳೆದಿದ್ದು ಮೈಹರಿನಲ್ಲಿಯೇ. ನಾನು ಅಜ್ಜನಿಂದ ಸಂಗೀತ ಕಲಿಯೋದಕ್ಕೆ ಶುರುಮಾಡಿದಾಗ ಇನ್ನೂ ಐದು ವರ್ಷಗಳ ಹುಡುಗ. ಮೊದಮೊದಲು ಕೆಲವು ಗಂಟೆ, ಆಮೇಲೆ ನಿಧಾನವಾಗಿ ರಿಯಾಜಿನ ಅವಧಿ ಹೆಚ್ಚಾಯಿತು. ದಿನದಲ್ಲಿ 12 ಗಂಟೆ ರಿಯಾಜ್ ಮಾಡಲು ಶುರು ಮಾಡಿದೆ. ಬೆಳಗ್ಗೆ ನಾಲ್ಕು ಗಂಟೆ, ಮಧ್ಯಾಹ್ನ ನಾಲ್ಕು ಗಂಟೆ, ಸಂಜೆ ನಾಲ್ಕು ಗಂಟೆ. ಕೆಲವೊಮ್ಮೆ ಬಾಬಾ ನಂಗೆ ಹೊಸದೇನನ್ನೋ ಕಲಿಸ್ತೀನಿ ಬಾ ಅಂತ ಕರೀತಿದ್ದರು, ಅದೂ ಗಂಟೆಗಟ್ಟಲೆ ನಡೆಯುತ್ತಿತ್ತು. ಆಗ ಕೆಲವು ಸಲ ಅತ್ತೆ ಅನ್ನಪೂರ್ಣಾದೇವಿಯವರು ಶುಭೋನನ್ನು ಕರೆದುಕೊಂಡು ಬಂದು ಮೈಹರಿನಲ್ಲಿ ಇರ್ತಿದ್ದರು. ಬಾಬಾ ಎಲ್ಲಾದರೂ ಕಛೇರಿ ಕೊಡುವುದಕ್ಕೆ ಅಥವಾ ರೇಡಿಯೊ ಕಾರ್ಯಕ್ರಮ ಕೊಡುವುದಕ್ಕೆ ಪ್ರವಾಸ ಹೋದಾಗ ಅತ್ತೆ ನಮಗೆಲ್ಲರಿಗೂ ಅಂದರೆ ನನಗೆ, ಎರಡನೇ ತಮ್ಮ ಧ್ಯಾನೇಶ್ ಖಾನ್, ನನ್ನ ತಂಗಿ ಅಮಿನಾ ಎಲ್ಲರಿಗೂ ಕಲಿಸುತ್ತಿದ್ದರು, ಪ್ರಾಕ್ಟೀಸ್ ಮಾಡಿಸುತ್ತಿದ್ದರು. ನನ್ನ ತಮ್ಮ ಪ್ರಾಣೇಶ್ ತುಂಬ ಚಿಕ್ಕವನಿದ್ದ. ನಾವು ಹಾಡುವಾಗ ಅವನು ಡೋಲಕ್ ತೆಗೆದುಕೊಂಡು, ನಾವು ಹಾಡಿದ್ದನ್ನೇ ನುಡಿಸುತ್ತಿದ್ದ. ಡೋಲಕ್ ಎಷ್ಟು ದೊಡ್ಡದಿತ್ತು, ಇವನು ಎಷ್ಟು ಚಿಕ್ಕವನಿದ್ದ ಓಹ್ ಆದ್ರೂ ಪ್ರಯತ್ನ ಮಾಡ್ತಿದ್ದ!

ಆಗೊಮ್ಮೆ ಅವರು ತಮ್ಮ ಸುರಬಹಾರ್ ತೆಗೆದುಕೊಂಡು, ನನಗೆ ಆಲಾಪ್ ಕಲಿಸಲು ಶುರು ಮಾಡಿದರು. ನನಗಾಗ ಹತ್ತೋ ಹನ್ನೊಂದು ವರ್ಷವಿರಬೇಕು. ಆಲಾಪ್ ಎಂದರೆ ಏನು ಅಂತಲೂ ನನಗೆ ಕಲ್ಪನೆ ಇರಲಿಲ್ಲ. ಬಾಬಾ ಪ್ರವಾಸದಿಂದ ಮರಳಿದ ನಂತರ, ಅವರ ಎದುರಿಗೆ ಆಲಾಪ್ ನುಡಿಸಿ ತೋರಿಸು ಎಂದು ಅತ್ತೆ ಹೇಳಿದರು. ನಾನು ನುಡಿಸೋದನ್ನು ಕೇಳಿ ಬಾಬಾಗೆ ಅಚ್ಚರಿಯಾಯಿತು. ಅಂದಿನಿಂದ ಬಾಬಾ ನನಗೆ ಬೇರೆ ಬೇರೆ ರಾಗಗಳ ಆಲಾಪ್ ನುಡಿಸೋದನ್ನು ಕಲಿಸಲು ಶುರು ಮಾಡಿದರು. ನನ್ನ ಆಲಾಪ್ ಶುರುವಾಗಿದ್ದೇ ಅತ್ತೆಯಿಂದ. ನಮ್ಮ ಸ್ವರಯಾನವೇನಿದ್ದರೂ ಗಾಯನದಿಂದಲೇ ಶುರುವಾಗುತ್ತಿತ್ತು. ಸರಗಮ್‌ಗೆ ಹಾಡೋದು ಬಹಳ ಮುಖ್ಯ, ಜೊತೆಗೆ ವಿವಿಧ ರಾಗಗಳ ಸಂಯೋಜನೆಗಳನ್ನು ಕಲಿಯೋದಕ್ಕೆ ಅದರಲ್ಲೂ ಮುಖ್ಯವಾಗಿ ಬಿಲಾವಲ್, ಭೈರವ್, ಭೈರವಿ, ತೋಡಿ, ಯಮನ್ ಕಲ್ಯಾಣ್, ಇಂತಹ ಕೆಲವು ಪ್ರಾಥಮಿಕ ರಾಗಗಳನ್ನು ಕಲಿಯೋದಕ್ಕೂ ಅದು ಮುಖ್ಯವಿತ್ತು. ನಾವು ಎಲ್ಲರೂ ಒಟ್ಟಿಗೇ ಹಾಡುತ್ತಿದ್ದೆವು. ಅವರು ಬೇರೆ ಬೇರೆ ರಾಗಗಳಲ್ಲಿ

**ಖ್ಯಾತ ಸರೋದ್ ವಾದಕ ಉಸ್ತಾದ್ ಆಶೀಷ್ ಖಾನರು ಮೈಹರ್ ಘರಾಣೆಯನ್ನು ಹುಟ್ಟುಹಾಕಿದವರು, 'ಬಾಬಾ' ಎಂದೇ ಹೆಸರಾದ ಉಸ್ತಾದ್ ಅಲ್ಲಾವುದ್ದೀನ್ ಖಾನರ ಮೊಮ್ಮಗ. ಬಾಬಾ ಅವರಿಂದ ನೇರ ಕಲಿತ ಶಿಷ್ಯರಲ್ಲಿ ಈಗ ಬದುಕಿರುವವರು ಇವರೊಬ್ಬರೇ. ಅವರಿಗೆ 2022ನೇ ಸಾಲಿನ ಇನ್ಫೋಸಿಸ್ ಸಿತಾರ್ ನವಾಜ್ ಉಸ್ತಾದ್ ಬಾಲೇಖಾನ್ ಸ್ಮರಣೆ ಪ್ರಶಸ್ತಿಯನ್ನು ನೀಡಿ ಗೌರವಿಸಲಾಗಿದೆ. ಪ್ರಶಸ್ತಿ ಸ್ವೀಕಾರ ಕಾರ್ಯಕ್ರಮಕ್ಕೆಂದು ಇತ್ತೀಚೆಗೆ ಬೆಂಗಳೂರಿಗೆ ಆಗಮಿಸಿದ್ದ ಅವರೊಂದಿಗೆ ನಡೆಸಿದ ಅನೌಪಚಾರಿಕ ಮಾತುಕತೆಯ ನಿರೂಪಣೆ ಇಲ್ಲಿದೆ.**

■ **ಸುಮಂಗಲಾ**

ಅವರೇ ಸಂಯೋಜಿಸಿದ ಸಂಗತಿಗಳನ್ನು ಕಲಿಸುತ್ತಿದ್ದರು. ಕೆಲವೊಮ್ಮೆ ಕಲಿಸುವಾಗ ಹಾಡಿನ ಅಥವಾ ಬಂದಿಶ್‌ನ ಸಾಲುಗಳನ್ನು ಬರೆಯುತ್ತಿದ್ದರು."

◆ **ಬಾಬಾ ಜೊತೆಗೆ ಆಶೀಷರು ಅತಿ ಚಿಕ್ಕ ವಯಸ್ಸಿನಲ್ಲಿಯೇ ಮೊದಲ ಕಛೇರಿ ನೀಡಿದ್ದರು. ಆ ಅನುಭವ ಹೇಗಿದ್ದಿರಬಹುದು?**

ನನಗೆ ಬಾಬಾನ ಜೊತೆಗೆ ದೆಹಲಿ ಆಕಾಶವಾಣಿಯಲ್ಲಿ ಮೊಟ್ಟಮೊದಲ ಬಾರಿಗೆ ನುಡಿಸೋ ಅವಕಾಶ ಸಿಕ್ಕಿತ್ತು. ಅದೊಂದು ಮರೆಯಲಾರದ ಅನುಭವ. ಆಗ ಮೊದಲ ಬಾರಿಗೆ ಆಕಾಶವಾಣಿಯಲ್ಲಿ ಪ್ರತಿ ಶನಿವಾರ ಶಾಸ್ತ್ರೀಯ ಸಂಗೀತದ ಕಾರ್ಯಕ್ರಮ ಶುರುಮಾಡಿದರು, ಅದು ನೇರ ಪ್ರಸಾರವಾಗುತ್ತಿತ್ತು. ಹೊಸದಾಗಿ ಶುರುವಾಗಿದ್ದ ಆ ಸರಣಿಯಲ್ಲಿ ಎರಡನೇ ಕಾರ್ಯಕ್ರಮ ನೀಡಲು ಬಾಬಾನಿಗೆ ಆಹ್ವಾನ ಕೊಟ್ಟಿದ್ದರು. ಈ ಕಾರ್ಯಕ್ರಮವನ್ನು ಆಗ ದೆಹಲಿ ಆಕಾಶವಾಣಿಯ ನಿರ್ದೇಶಕರಾಗಿದ್ದ ಡಾ. ನಾರಾಯಣ ಮೆನನ್ ಆರಂಭಿಸಿದ್ದರು. ಪಂಡಿತ್ ರವಿಶಂಕರ್ ಕೂಡ ಅಲ್ಲಿ ಕೆಲಸ ಮಾಡುತ್ತಿದ್ದರು. ಈ ನೇರ ಕಾರ್ಯಕ್ರಮ ಬಹಳ ವರ್ಷಗಳವರೆಗೆ ನಡೀತು. ಬಹಳ ಪ್ರಸಿದ್ಧವಾಗಿತ್ತು. ಹಾಗೆ ಬಾಬಾನ ಜೊತೆಗೆ ಅಲ್ಲಿ ಕಾರ್ಯಕ್ರಮ ನೀಡಿದ್ದು ನನಗೆ ಬಹಳ ಖುಷಿಕೊಟ್ಟಿತ್ತು. ಯಾವ ರಾಗ ಅನ್ನೋ ವಿವರಗಳೆಲ್ಲ ಈಗ ನನಗೆ ನೆನಪಿಲ್ಲ, ಯಾಕಂದ್ರೆ ತುಂಬ ಚಿಕ್ಕವನಿದ್ದೆ. ನಾವಿಬ್ಬರೂ ಅಂದು ಸರೋದ್ ನುಡಿಸಿದ್ದೆವು. ಬಾಬಾ ನುಡಿಸಿದಂತೆ ನಾನು ಅವರನ್ನು ಅನುಸರಿಸಿ ನುಡಿಸಿಕೊಂಡು ಹೋದೆ. ಪಂಡಿತ್ ಕಾಂತೆ ಮಹಾರಾಜ್ ತಬಲಾ ನುಡಿಸಿದ್ದರು ಎಂಬ ಅಂಶವೊಂದು ನನಗೆ ನೆನಪಿದೆ.

◆ **ಬಾಬಾ ಸರೋದ್, ಸಿತಾರ್, ಸುರಬಹಾರ್, ಕೊಳಲು ಹೀಗೆ ಅನೇಕ ವಾದ್ಯಗಳನ್ನು ಹೇಳಿಕೊಡುತ್ತಿದ್ದರು. ಆದರೆ ಆಶೀಷರು ಅದು ಹೇಗೆ ಸರೋದಿನತ್ತಲೇ ಆಕರ್ಷಿತರಾದರು ಸರೋದ್ ನಾದದ ಅದಾವ ಮಾಯೆ ಇವರನ್ನು ಆವರಿಸಿಕೊಂಡಿತು...**

"ನಾನು ಅದ್ಯಾಕೆ ಸರೋದಿನತ್ತ ವಾಲಿದೆ ಅಂತ ಹೇಳಲಾರೆ. ಇಷ್ಟು ಮಾತ್ರ ಹೇಳಬಲ್ಲೆ, ನನಗೆ ನೆನಪಿದ್ದಾಗಿನಿಂದ ನಾನು ಹಾಡು ಮತ್ತು ಸರೋದ್ ಎರಡನ್ನೂ ಕಲಿಯುತ್ತಿದ್ದೆ. ಸ್ಕೂಲಿಗೆ ಹೋಗುತ್ತಿರಲಿಲ್ಲ. ಒಬ್ಬರು ಮೇಷ್ಟ್ರು ಮನೆಗೇ ಬಂದು ಕಲಿಸುತ್ತಿದ್ದರು. ಮನೆಯ ಪಕ್ಕದಲ್ಲೇ ಒಂದು ದೊಡ್ಡ ಮೈದಾನವಿತ್ತು. ನಾನು ಅವರ ಜೊತೆಗೆ ಫುಟ್‌ಬಾಲ್, ಕ್ರಿಕೆಟ್ ಆಡ್ತಿದ್ದೆ. ನಮ್ಮ ಅಂಗಳ ಎಷ್ಟು ದೊಡ್ಡದಿತ್ತು ಅಂದ್ರೆ ಬಾಬಾ ನಮಗಾಗಿ ಅದರಲ್ಲಿಯೇ ಒಂದು ಬ್ಯಾಡ್ಮಿಂಟನ್ ಕೋರ್ಟ್ ಮಾಡಿದ್ದರು. ಅಲ್ಲಿಯೂ ಆಡ್ತಿದ್ದೆವು. ಹಿಂಗಾಗಿ ಶಾಲೆಗೆ ಹೋಗಲಿಲ್ಲ ಅನ್ನೋದನ್ನು ಬಿಟ್ಟರೆ, ಓರಗೆಯ ಮಕ್ಕಳೊಂದಿಗೆ ಆಟಕ್ಕೇನೂ ಕೊರತೆಯಾಗಲಿಲ್ಲ! ಆದರೆ ತುಂಬಾ ಕಟ್ಟುನಿಟ್ಟಿನ ದಿನಚರಿ, ಪ್ರತಿಯೊಂದೂ ಸಮಯಕ್ಕೆ ಸರಿಯಾಗಿ ಆಗಬೇಕಿತ್ತು. ಸ್ವಲ್ಪ ಹೆಚ್ಚುಕಡಿಮೆಯಾದರೂ ಬಾಬಾನಿಂದ ಬೈಗುಳ ಕಟ್ಟಿಟ್ಟ ಬುತ್ತಿಯಾಗಿತ್ತು.

ನಾನು ಬಾಬಾನಿಂದ, ನಮ್ಮ ತಂದೆ ಉಸ್ತಾದ್ ಅಲಿ ಅಕ್ಬರ್ ಖಾನರಿಂದ ಮತ್ತು ಅತ್ತೆ ಅನ್ನಪೂರ್ಣಾದೇವಿಯಿಂದ ಕಲಿತೆ. ರವಿಶಂಕರ್ ಅವರಿಂದ ಕಲಿಯಲಿಲ್ಲ ನಿಜ, ಆದರೆ ಅವರಿಗೆ ತುಂಬ ಆಪ್ತನಾಗಿದ್ದೆ. ತಮ್ಮ ಮಗನ ಹಾಗೆ ನನ್ನ ಮೇಲೆ ಅಕ್ಕರೆ ತೋರಿಸ್ತಾ ಇದ್ದರು. ಅವರ ಯಾವುದೇ ಹೊಸ ಪ್ರಾಜೆಕ್ಟ್ ಬಂದರೂ, ಸಿನಿಮಾ ಇರಬಹುದು, ಏನಾದರೂ ಸ್ಟೇಜ್ ಸಂಬಂಧಿತವಿರಬಹುದು, ನನಗೆ ನುಡಿಸೋದಕ್ಕೆ ಹೇಳ್ತಾ ಇದ್ದರು. ನಾನು ಈ ಮೂವರಲ್ಲಿ ಯಾರಲ್ಲಿ ಹೆಚ್ಚು ಕಲಿತೆ ಅಥವಾ ಏನು ವಿಶಿಷ್ಟವಾಗಿದ್ದನ್ನು ಕಲಿತೆ ಎಂಬುದನ್ನು ಹೇಳೋದು ಕಠಿಣ. ವಿವಿಧ ತಾಲ್ ಹಾಗೂ ವಿವಿಧ ರಾಗಗಳನ್ನು ಮೂವರಿಂದಲೂ ಕಲಿತೆ. ಆದರೆ ಬಾಬಾನಿಂದ ಕೆಲವು ತಂತ್ರಗಳನ್ನು ಕಲಿತ ನಂತರ, ನಾನು ನನ್ನದೇ ಆದ ನುಡಿಸಾಣಿಕೆ ಶೈಲಿಯನ್ನು ರೂಢಿಸಿಕೊಂಡೆ. ನಾನು ಸುಮ್ಮನೇ ಕಾಪಿಕ್ಯಾಟ್ ಆಗೋದಕ್ಕೆ ಇಷ್ಟಪಡಲಿಲ್ಲ. ಯಾಕೆಂದರೆ ಬಾಬಾನ ತಾಲೀಮ್ ನಮಗೆ ಹಾಗಿರುತ್ತಿತ್ತು. ಆ ತಾಲೀಮ್ ನಮ್ಮನ್ನು ಪ್ರತ್ಯೇಕ ಸಂಗೀತಗಾರ ಅಥವಾ ಕಲಾವಿದರನ್ನಾಗಿ ರೂಪಿಸುತ್ತ, ನಮ್ಮದೇ ಆದ ಅಭಿವ್ಯಕ್ತಿಯನ್ನು ಕಂಡುಕೊಳ್ಳೋ ಹಂಗೆ ಮಾಡುತ್ತಿತ್ತು. ಹಿಂಗಾಗಿ ನಾನು ಬಹುಬೇಗನೆ ನನ್ನದೇ ಆದ ಶೈಲಿಯನ್ನು, ತಂತ್ರವನ್ನು ಬೆಳೆಸಿಕೊಂಡೆ.

◆ **ಅನ್ನಪೂರ್ಣಾದೇವಿಯವರಲ್ಲಿ ಕಲಿಯುವಾಗ, ಅವರಲ್ಲಿ ಸಪಾಟ್ ತಾನ್**